# ಶರಾವತಿ ಕೊಳ್ಳದಲ್ಲಿ ಸಂಬಂಜಗಳ ಹುಡುಕಾಟ

ಪಶ್ಚಿಮ ಘಟ್ಟಗಳದು ಸಹೃದಯರ ಮನಸೂರೆಗೊಳ್ಳುವ ಅಪೂರ್ವ ಸೌಂದರ್ಯ. ಈ ಚೆಲುವಿನ ಜೀವದಾಯಿನಿಗೆ ಬದುಕನ್ನು ಆರ್ದ್ರವಾಗಿ ಮಾನವೀಯವಾಗಿ ನೋಡಲು ಸಾಧ್ಯವಾಗುವ ಕಣ್ಣನ್ನು ಕರುಣಿಸುವ ಶಕ್ತಿಯೂ ಇದೆ. ಶರಾವತಿ ಕೊಳ್ಳದಲ್ಲಿನ ಅಲೆದಾಟದ ಈ ಬರಹ – ಕನ್ನಡನಾಡಿನ ಕಾಡುಕೊಳ್ಳಗಳ ಅನನ್ಯ ಸೌಂದರ್ಯದ ಜೊತೆಗೆ, ಪ್ರಕೃತಿಗೂ ನಮಗೂ ಯಾವ ಬಗೆಯ 'ಸಂಬಂಜ' ಎಂಬುದನ್ನೂ ಮನಗಾಣಿಸುತ್ತದೆ. ಧರ್ಮ, ದೇಶ, ಜಾತಿಗಳಲ್ಲಿ ವಿಭಜಿತವಾಗಿರುವ ನಾವು, ಪ್ರಕೃತಿಯ ಒಳಗಿನ ವಿವಿಧ ಘಟಕಗಳ ನಡುವಿನ ಕೂಡು 'ಸಂಬಂಜ'ವನ್ನು ಮುದ್ದಾಮಾಗಿ ಅರಿಯುವ ದಾರಿಯೊಂದನ್ನು ಈ ವಿಶಿಷ್ಟ ಬರಹ ನಮ್ಮ ಮುಂದಿಡುತ್ತಿದೆ.

**■ ರಹಮತ್ ತರೀಕೆರೆ**

ಮುಳ್ಳಯ್ಯನಗಿರಿ, ಬಾಬಾಬುಡನಗಿರಿ, ಕಲ್ಹತ್ತಿಗಿರಿಗಳ ಶೋಲಾ ಕಾಡುಗಳ ಜೊತೆ ಬಾಲ್ಯದಿಂದಲೂ ಒಡನಾಡಿರುವ ನನಗೆ, ಪಶ್ಚಿಮಘಟ್ಟದ ಕಾಡುಬೆಟ್ಟಗಳೆಂದರೆ ಕಾಫಿ ಎಸ್ಟೇಟುಗಳಿಂದ ಅತಿಕ್ರಮ ಪ್ರವೇಶದಿಂದ ಹರುಕುಮುರುಕಾದ ಚಿತ್ರಗಳದ್ದೇ ನೆನಪು. ಮುಂದೆ ನಿಜವಾದ ಪಶ್ಚಿಮಘಟ್ಟಗಳನ್ನು ಕುಮಾರಪರ್ವತ–ಕೊಡಚಾದ್ರಿ ಚಾರಣಗಳಲ್ಲಿ ಭೇಟಿಯಾದೆನು. ಈಚೆಗೆ ಶರಾವತಿ ಕೊಳ್ಳದ ತಿರುಗಾಟ ಮಾಡಿದೆ. ಇದು ಪಡುವಣ ಘಟ್ಟಗಳ ಮತ್ತಷ್ಟು ಗಾಢವಾದ ಚಿತ್ರಗಳನ್ನು ಅನುಭವಕ್ಕೆ ತಂದಿತು. ಹಲವು ಹೊಳೆಗಳ ಜನ್ಮಸ್ಥಾನಗಳನ್ನೂ ನಿಬಿಢವಾದ ಕಾನನಗಳನ್ನೂ ಪ್ರಾಚೀನ ಬಸದಿ ದೇಗುಲ ಕೋಟೆಗಳನ್ನೂ ಹಿನ್ನೀರ ಸರೋವರವನ್ನೂ ಒಳಗೊಂಡಿರುವ ಅಪೂರ್ವ ತಾಣವಿದು.

ಶರಾವತಿ ಕಣಿವೆಯಲ್ಲಿ ತಿರುಗಾಡುವಾಗ ಕಮರಿಗಳ ಆಳವಾಗಲೀ ಬೆಟ್ಟಗಳ ಎತ್ತರವಾಗಲೀ ಥಟ್ಟನೆ ಅರಿವಿಗೆ ಬರುವುದಿಲ್ಲ. ಕಾರಣ, ಮರಗಳ ನಡುವಿಂದ ಚೂರುಪಾರು ಇಣುಕುವ ಆಗಸ ಬಿಟ್ಟರೆ ಏನೊಂದೂ ಗೋಚರವಾಗುವುದಿಲ್ಲ. ಇರುವೆ ಹುಲ್ಲಿನೊಳಗೆ ಓಡಾಡಿದಂತೆ ಕಾಡೊಳಗಿಂದ ಸುಮ್ಮನೆ ಹಾಯುತ್ತಿರುತ್ತೇವೆ. ಬೆಟ್ಟವೊಂದರ ತುದಿಗೆ ತಲುಪಿದಾಗ ಕಣಿವೆಯ ಆಳವೇನೆಂದು ತಿಳಿಯುತ್ತದೆ; ಬೆಟ್ಟವಿಳಿದು ಹಿಂತಿರುಗಿ ಶಿಖರವನ್ನು ನೋಡಿದಾಗಲೇ ಎತ್ತರವೇನೆಂದು ಗೋಚರವಾಗುತ್ತದೆ. ನಾವು ಹತ್ತಿದ ನಾಗೊಳ್ಳಿಯ ಏಡಿಗುಡ್ಡ, ಕಾನೂರು ಕೋಟೆಯಿಂದ ಇಳಿದ ಗೇರುಸೊಪ್ಪೆಯ ಇಳುಕಲು ಇದಕ್ಕೆ ಸಾಕ್ಷಿ. ಕಾನೂರ ಇಳುಕಲಂತೂ ಮೆಣಸಿನರಾಣಿ ಚೆನ್ನಭೈರಾದೇವಿ, ಸರಕನ್ನು ಹೊಳೆತಟದ ನಾವೆಗಳಿಗೆ ಕುದುರೆಹೇರಿನ ಮೂಲಕ ಸಾಗಿಸಲು ಮಾಡಿದ ಹಾದಿ. ಮುಂಬೈ ಲೋಕಲ್ ಟ್ರೈನುಗಳಲ್ಲಿ ಬಾಗಿಲ ಬಳಿ ನಿಂತರೆ ಹಿಂದಿದ್ದ ಜನ ನಮ್ಮನ್ನು ದೂಡಿ ಇಳಿಸುವಂತೆ, ಇದು ನಮ್ಮನ್ನು ಬೆನ್ನಿಗೆ ಕೈಹಾಕಿ ದಬ್ಬುತ್ತ ಶರಾವತಿ

